ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ಯವರ ನ್ಯಾಯಾಲಯ, ಚಾಮರಾಜನಗರ .
ಸಿಸಿ.850/2014

| | | | |
|---|---|---|---|
| ಸಾಕ್ಷಿದಾರರು ಹೆಸರು | : | ಬಿ.ನಂಜುಂಡಯ್ಯ | ದಿನಾಂಕಃ **09.06.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು. |
| ತಂದೆಯ ಹೆಸರು | : | ಲೇಟ್ ಚಿಕ್ಕಬಸವಯ್ಯ | |
| ವಯಸ್ಸು | : | **69** ವರ್ಷ | |
| ಉದ್ಯೋಗ | : | ನಿವೃತ್ತ ಎ ಎಸ್ ಐ | **CW-17** |
| ವಾಸಸ್ಥಳ | : | ಟಿ. ನರಸೀಪುರ, ಮೈಸೂರು ತಾಃ | **PW-7** |

ಮುಖ್ಯ ವಿಚಾರಣೆ : ಮಾನ್ಯ ಎಪಿಪಿರವರಿಂದಃ

ನಾನು 2009 ರಿಂದ 2014 ರವರೆಗೆ ಚಾಮರಾಜನಗರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಎಎಸ್ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 08.02.2014 ರಂದು ಚಾಸಾ 16 ರವರು ನನಗೆ ಕಡತ ವಹಿಸಿದ ನಂತರ ದಿಃ09.02.2014 ರಂದು ಕೃತ್ಯ ನಡೆದ ಸ್ಥಳಕ್ಕೆ ಬೇಟಿ ನೀಡಿ ನಿಪಿ 1 ರಂತೆ ಮಹಜರ್ ಮಾಡಿರುತ್ತೇನೆ. ನಿಪಿ 1 ರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ1(ಡಿ) ಎಂದು ಗುರುತಿಸಲಾಯಿತು. ಮಹಜರ್ ಕಾಲದಲ್ಲಿ ಪಲ್ಸರ್ ಮೋಟಾರ್ ಸೈಕಲ್ ಮತ್ತು ತಮಿಳುನಾಡಿನ ಸರ್ಕಾರಿ ಬಸ್ಸನ್ನು ಅಮಾನತ್ತು ಪಡಿಸಿಕೊಂಡಿರುತ್ತೇನೆ. ನಂತರ ಚಾಸಾ 4 ರಿಂದ 6 ರವರ ಹೇಳಿಕೆಯನ್ನು ಪಡೆದಿರುತ್ತೇನೆ. ಅದೇ ದಿನ ಬೆಳಿಗ್ಗೆ 7.45 ರಿಂದ 10.00 ಗಂಟೆಯ ವರೆಗೆ ನಿಪಿ 3 ರಂತೆ ಶವಪಂಚನಾಮೆ ಮಾಡಲಾಗಿರುತ್ತದೆ. ಚಾಸಾ 7 ರಿಂದ 9 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ನಂತರ ಶವವನ್ನು ಸಂಬಂಧಿಕರಿಗೆ ಹಸ್ತಾಂತರಿಸುವಂತೆ ಸಿಬ್ಬಂದಿಗೆ ಆದೇಶ ಮಾಡಿರುತ್ತೇನೆ. ಪ್ರಕರಣವು ಘೋರ ಅಪರಾಧಕ್ಕೆ ಸಂಬಂಧಿಸಿದ ಕಾರಣ ಕಡತವನ್ನು ಚಾಸಾ 18 ರವರಿಗೆ ವಹಿಸಿಕೊಟ್ಟಿರುತ್ತೇನೆ.

ಸಾಕ್ಷಿ ಕಡತದಲ್ಲಿರುವ ಬೈಕಿನ ಎರಡು ಛಾಯಾಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ 9 ಮತ್ತು 10 ಎಂದು, ಸಾಕ್ಷಿ ಕಡತದಲ್ಲಿರುವ ಬಸ್ಸಿನ ಎರಡು ಛಾಯಾಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ 11 ಮತ್ತು 12 ಎಂದು ಗುರುತಿಸಲಾಯಿತು.

ಪಾಟೀಸವಾಲುಃ ಆರೋಪಿ ಪರ ಶ್ರೀ ಜಿ ಎಸ್ ಕೆ ವಕೀಲರಿಂದಃ

ಚಾಸಾ **5** ಮತ್ತು **6** ರವರಿಗೆ ಮಹಜರ್ ಕುರಿತು ನಾನು ಲಿಖಿತ ನೋಟೀಸ್ ಜಾರಿ ಮಾಡಿರುವುದಿಲ್ಲ. ನಿಪಿ **1** ರಲ್ಲಿ ಚಾಸಾ **5** ಮತ್ತು **6** ರವರು ಸ್ಥಳದಲ್ಲಿ ಲಭ್ಯವಿದ್ದ ಕಾರಣ ಅವರಿಗೆ ಲಿಖಿತ ನೋಟೀಸ್ ಜಾರಿ ಮಾಡಿರುವುದಿಲ್ಲ ಎಂದು ಬರೆದಿರುವುದಿಲ್ಲ. ನಿಪಿ **1** ನ್ನು ಠಾಣೆಯಲ್ಲಿ ತಯಾರಿಸಿ ಚಾಸಾ

5 ಮತ್ತು 6 ರವರ ಸಹಿ ಪಡೆದಿದ್ದು ಸ್ಥಳದಲ್ಲಿ ಮಹಜರ್ ಮಾಡಲಾಯಿತು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡಿರುವುದಿಲ್ಲ ಅವುಗಳನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಚಾಸಾ 1 ರವರಿಗೆ ಅನುಕೂಲವಾಗಲೀ ಎಂದು ನಾನು ತನಿಖೆ ಮಾಡಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಮೇಲಾಧಿಕಾರಿಗಳ ಮಾತು ಕೇಳಿ ದಾಖಲೆಗಳನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಅದಕ್ಕೆ ಪೂರಕವಾಗಿ ದಾಖಲೆಗಳನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲಾ.

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇ ಒ.,

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಚಾಮರಾಜನಗರ.